Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 925/2025

ಸಿ ಡಬ್ಲ್ಯೂ-6
ಪಿ ಡಬ್ಲ್ಯೂ-6

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಸಂಗಮೇಶ ಸುಗ್ರೀವ |
| ತಂದೆಯ ಹೆಸರು | ಃ- | ನಿಂಗಪ್ಪ |
| ವಯಸ್ಸು | ಃ- | 35 ವರ್ಷ |
| ಉದ್ಯೋಗ | ಃ- | ಇಂಜನಿಯರ್ |
| ವಾಸಸ್ಥಳ | ಃ- | ದಾಸನಾಳ. ತಾ:ಗಂಗಾವತಿ |

**ದಿ.15-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ತಂಗಿ. ಚಾ.ಸಾ-4 ನನ್ನ ತಾಯಿ. ಚಾ.ಸಾ-5 ನನ್ನ ಅಣ್ಣ. ಚಾ.ಸಾ-7 ದೊಡ್ಡಮ್ಮ. ಚಾ.ಸಾ-8 ನನ್ನ ದೊಡ್ಡಮ್ಮನ ಮಗ. ಚಾ.ಸಾ-9 ನನ್ನ ಮಾವ. ಚಾ.ಸಾ-10 ರಿಂದ 12 ರವರ ಪರಿಚಯ ಇದೆ. 1ನೇ ಆರೋಪಿ ನನ್ನ ತಂಗಿಯ ಗಂಡ. 2ನೇ ಆರೋಪಿ ಅವರ ತಮ್ಮ. ಚಾ.ಸಾ-1 ಮತ್ತು 1ನೇ ಆರೋಪಿಯ ಮದುವೆ 8 ವರ್ಷಗಳ ಹಿಂದೆ ಗಂಗಾವತಿಯಲ್ಲಿ ಆಗಿರುತ್ತದೆ. ಮದುವೆಯಾದ ನಂತರ ಚಾ.ಸಾ-1 ರವರು ಗಂಡನ ಮನೆಯಲ್ಲಿ ಚೆನ್ನಾಗಿ ಇರುತ್ತಾರೆ. ಆರೋಪಿತರು ಚಾ.ಸಾ-1 ರವರಿಗೆ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲ. ಕೈಯಿಂದ ಹೊಡೆ ಬಡೆ ಮಾಡಿಲ್ಲ. ಅವಾಚ್ಯವಾಗಿ ಬೈದು ಪ್ರಾಣ ಬೆದರಿಕೆ ಹಾಕಿಲ್ಲ. ಈ ಕುರಿತು ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ:-**

ದಿನಾಂಕ 12-02-2018 ರಂದು ಚಾಸಾ-1 ಮತ್ತು 1ನೇ ಆರೋಪಿಯ ಮದುವೆ ಆಗಿರುತ್ತದೆ. ಮದುವೆಯಾದ ನಂತರ ಚಾ.ಸಾ-1 ರವರು ಲಿಂಗಸುಗೂರಿನ ಅವರ ಗಂಡನ ಮನೆಗೆ ಬಂದಿರುತ್ತಾರೆ. ಮದುವೆ ಕಾಲಕ್ಕೆ 3 ತೊಲೆ ಬಂಗಾರ ವರದಕ್ಷಿಣೆಯಾಗಿ ಕೊಟ್ಟು ಮದುವೆ ಮಾಡಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 6 ತಿಂಗಳವರೆಗೆ ಚೆನ್ನಾಗಿ ಸಂಸಾರ ಮಾಡಿರುತ್ತಾರೆ. ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದು ಅವರು ಜೈಸೀತ್ ಮತ್ತು ಭವಿತ್

ಇರುತ್ತಾರೆ. 1ನೇ ಆರೋಪಿ ಲಿಂಗಸುಗೂರಿನಲ್ಲಿ ಕಟಿಂಗ್ ಶಾಪ್ ಅಂಗಡಿ ನಡೆಸುತ್ತಿದ್ದಾರೆ. ನಂತರದ ದಿನಗಳಲ್ಲಿ 1ನೇ ಆರೋಪಿ ಕುಡಿತದ ಚಟಕ್ಕೆ ದಾಸನಾಗಿ ಮನೆಯಲ್ಲಿ ಸಣ್ಣ-ಪುಟ್ಟ ವಿಷಯಕ್ಕೆ ಜಗಳ ತೆಗೆದು ನಿನಗೆ ಅಡುಗೆ ಸರಿಯಾಗಿ ಮಾಡಲು ಬರುವದಿಲ್ಲ ಎಂದು ಹೇಳಿ ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅದಾದ ಮೇಲೆ ಆರೋಪಿತರು ಲಿಂಗಸುಗೂರಿನಲ್ಲಿ ಕಟಿಂಗ್ ಶಾಪ್ ಮತ್ತು ಬೇರೆ ಬ್ಯುಜಿನೆಸ್ ಮಾಡುವದಕ್ಕೆ ಹಾಗೂ ಮದುವೆ ಸಮಯದಲ್ಲಿ ನಿನ್ನ ತವರು ಮನೆಯವರು ವರದಕ್ಷಿಣೆ ಕೊಟ್ಟಿಲ್ಲ ಎಂದು ನಮ್ಮ ತವರು ಮನೆಯಲ್ಲಿ ಚೆನ್ನಾಗಿ ಇದ್ದಾರೆ 30-40 ಲಕ್ಷ ಹಣ ತೆಗೆದುಕೊಂಡು ಬಾ ಎಂದು ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಅದಕ್ಕೆ ಚಾ.ಸಾ-1 ರವರು ನಮ್ಮ ತವರು ಮನೆಯವರು ಮದುವೆಯನ್ನು ಅದ್ದೂರಿಯಾಗಿ ಮಾಡಿ ಕೊಟ್ಟಿದ್ದಾರೆ ನಮ್ಮ ಮನೆಯಿಂದ ದುಡ್ಡು ಕೊಡಲು ಆಗುವದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಅದೇ ವಿಷಯವನ್ನು ಇಟ್ಟುಕೊಂಡು ಚಾ.ಸಾ-1 ರವರಿಗೆ ಮಾನಸಿಕ ಕಿರುಕುಳ ಕೊಟ್ಟಿದ್ದನ್ನು ತವರು ಮನೆಯವರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಲಿಂಗಸುಗೂರಿಗೆ ಬಂದು ಆರೋಪಿತರಿಗೆ ಬುದ್ದಿ ಹೇಳಿ ನನಗೂ ಸಹ ಬುದ್ದಿವಾದ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಅದಾದ ನಂತರ ಅವರು ಸ್ವಲ್ಪ ದಿನ ಚೆನ್ನಾಗಿ ಇದ್ದು, ನಂತರ 1ನೇ ಆರೋಪಿ ಬುಜಿನೆಸ್ ಸಲುವಾಗಿ ಹಣ ತೆಗೆದುಕೊಂಡು ಬಂದಿಲ್ಲ ಎಂದು ಹೊಡೆಬಡೆ ಮಾಡಿರುತ್ತಾನೆ ಎಂದರೆ ಸರಿಯಲ್ಲ.

2. ದಿನಾಂಕ 23-03-2025 ರಂದು ಮದ್ಯಾಹ್ನ 2-30 ಕ್ಕೆ 1ನೇ ಆರೋಪಿ ಲಿಂಗಸುಗೂರಿನ ಅವರ ಮನೆಗೆ ಬಂದು ಊಟ ಮಾಡುತ್ತಿದ್ದಾಗ ಊಟ ಸರಿ ಇಲ್ಲ ಎಂದು ಸೂಳೆ ಎಂದು ಚಾ.ಸಾ-1 ರವರಿಗೆ ಬೈದು ನಿನ್ನ ತವರು ಮನೆಯಿಂದ 30-40 ಲಕ್ಷ ತೆಗೆದುಕೊಂಡು ಬಾ ಎಂದು ಹೊಡೆಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾ.ಸಾ-1 ರವರಿಗೆ ಇಲ್ಲ-ಸಲ್ಲದ ಮಾತುಗಳು ಬೇಡ ಎಂದು ಹೇಳಿದ್ದಕ್ಕೆ ಅವರಿಗೆ 1ನೇ ಆರೋಪಿ ಬೂಟು ಮತ್ತು ಬೆಲ್ಟನಿಂದ ಬಲಗಡೆ ಬುಜಕ್ಕೆ ಮತ್ತು ಕುತ್ತಿಗೆಗೆ ಹೊಡೆದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ದಿನಾಂಕ 24-03-2025 ರಂದು ಬೆಳಿಗ್ಗೆ 11-50 ಕ್ಕೆ 1ನೇ ಆರೋಪಿ ಮನೆಗೆ ಬಂದು ಲೇ ಸೂಳೇ ಇವತ್ತು ಎರಡರಲ್ಲಿ ಒಂದು ಆಗಬೇಕು ಎಂದು ಚಾ.ಸಾ-1 ರವರಿಗೆ ನಿನ್ನ ತವರು ಮನೆಯಿಂದ ನಾನು ಕೇಳಿದಷ್ಟು ಹಣ ಬೇಕು ಇಲ್ಲವೆಂದರೆ ಮನೆ ಬಿಟ್ಟು ಹೋಗಬೇಕು ಎಂದು ಬೈದಿರುತ್ತಾನೆ ಎಂದರೆ ಸರಿಯಲ್ಲ. ಅದಕ್ಕೆ ಚಾ.ಸಾ-1 ರವರು ದಿನಂಪ್ರತಿ ಇದೇ ಮಾಡಲು ಆಗುವದಿಲ್ಲ ಎಂದು ತನ್ನ ತವರು ಮನೆಯವರಿಗೆ ಹೇಳುತ್ತೇನೆ ಎಂದು ಹೇಳಿದಾಗ ನನ್ನನ್ನು

ಹೆದರಿಸುತ್ತಿಯಾ ಅವರನ್ನು ಕರೆಯಿಸಿ ಅವರನ್ನು ಸೇರಿಸಿ ತುಂಡು-ತುಂಡಾಗಿ ಕತ್ತರಿಸಿ ಬಿಡುತ್ತೇನೆ ಎಂದು ಬೈದು ಬೆಲ್ಟಿನಿಂದ ಬಲಗಡೆ ತಲೆಗೆ ಹೊಡೆದು ಒಳಪೆಟ್ಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾ.ಸಾ-1 ರವರು ಚೀರಾಡಿ ಹೊರಗಡೆ ಬಂದಾಗ 1ನೇ ಆರೋಪಿ ಲೇ ಸೂಳೆ ನೀನು ಎಲ್ಲಿಗೆ ಹೋಗುತ್ತಿಯಾ ಹೋಗು ನೀನು ಮನೆಗೆ ಬಂದರೆ ಪೆಟ್ರೋಲ್ ಹಾಕಿ ಸುಡುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾ.ಸಾ-1 ರವರಿಗೆ ಗಾಯಗಳಾಗಿದ್ದರಿಂದ ಲಿಂಗಸುಗೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನನಗೆ, ಚಾ.ಸಾ-4, 5, 7 ರಿಂದ 9 ರವರಿಗೆ ತಿಳಿಸಿರುತ್ತಾಳೆ ಎಂದರೆ ಸರಿಯಲ್ಲ. ನಾವು ಲಿಂಗಸುಗೂರು ಆಸ್ಪತ್ರೆಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ಕುರಿತು ಚಾ.ಸಾ-1 ರವರು ಲಿಂಗಸುಗೂರು ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಇದೇ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-10 ಎಂದು ಗುರುತಿಸಲಾಯಿತು. ಚಾ.ಸಾ-1 ರವರು ಅವರ ಗಂಡನ ಮನೆಯಲ್ಲಿ ಸುಖವಾಗಿ ಜೀವನ ಮಾಡುತ್ತಿದ್ದಾರೆ. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದಕಾರಣ ನಿ.ಪಿ-10 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎ.ಸಿ.ಪಿ ವಕೀಲರಿಂದ : -**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.